# ಅಧ್ಯಕ್ಷಾಧಿಕಾರಿಗಳು, ಕಾರ್ಮಿಕ ನ್ಯಾಯಾಲಯ, ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ

**ಉಪಸ್ಥಿತರು** : **ಶ್ರೀ. ಎಸ್.ಎಂ. ಕಲಾಲ,**

ಬಿ.ಕಾಮ್., ಎಲ್.ಎಲ್.ಬಿ, (ಸ್ಪೆ)

**ಅಧ್ಯಕ್ಷಾಧಿಕಾರಿಗಳು, ಕಾರ್ಮಿಕ ನ್ಯಾಯಾಲಯ, ಹುಬ್ಬಳ್ಳಿ.**

**ತೀರ್ಪಿನ ದಿನಾಂಕ : 30 ನೇ ಸೆಪ್ಟೆಂಬರ್ 2019**

## ಕೆ.ಐ.ಡಿ. ನಂಃ 01/2018

**ಅರ್ಜಿದಾರರು** : ಶ್ರೀ. ವಸಂತ
ಸನ್ ಆಫ್ ವೆಂಕಟರಮಣ ನಾಯ್ಕ
ವಯಸ್ಸು : 42 ವರ್ಷಗಳು, ಉದ್ಯೋಗಃ ಏನೂ ಇಲ್ಲ,
ಸಾಃಹೆಗಡೆ, ತಾಃ ಕುಮಟಾ. ಡಿಸ್ಟ್ರಿಕ್ಟ : ಉತ್ತರ ಕನ್ನಡ

**(ಶ್ರೀ. ಎಸ್.ಕೆ. ಹೆಗಡೆ, ವಕೀಲರು)**

**ವಿರುದ್ಧ**

**ಎದುರುದಾರರು** : ದಿ.ಡಿವಿಜನಲ್ ಕಂಟ್ರೋಲರ,
ಎನ್. ಡಬ್ಲೂ. ಕೆ.ಆರ. ಟಿ.ಸಿ. ಹುಬ್ಬಳ್ಳಿ ಡಿವಿಜನ,
ಹುಬ್ಬಳ್ಳಿ-580 026.

**(ಶ್ರೀಮತಿ. ಆರ್ ಎಸ್ ಬಗಲಿ, ವಕೀಲರು )**

**ಕೆ.ಐ.ಡಿ. ನಂಃ 01/2018**

# ಐತೀರ್ಪು

1. ಸದರ ಪ್ರಕರಣದಲ್ಲಿ ಕ್ಲೇಮುದಾರರು/ 1 ನೇ ಪಕ್ಷದಾರರು (ವರ್ಕಮನ್ - ಕೆಲಸಗಾರ) ರವರು ಕ್ಲೇಮ ಅರ್ಜಿಯನ್ನು ಔದ್ಯಮಿಕ ವಿವಾದಗಳ ತಿದ್ದುಪಡಿ ಕಾಯ್ದೆ 1987 ಕಲಂ 10(4-ಎ)ರ ಅಡಿಯಲ್ಲಿ ಎದುರುದಾರರ ಆಡಳಿತ ಮಂಡಳಿಯವರ ವಿರುದ್ಧ ಸಲ್ಲಿಸಿ ತನ್ನನ್ನು ಸೇವೆಯಿಂದ ತೆಗೆದು ಹಾಕುವ ಕುರಿತಂತೆ ಮಾಡಿರುವ ಆದೇಶ ಸಂಖ್ಯೆ: VA.KA.RA.SA / HUVI / SHIKRASHA/GAIHA/689(16)3914 ದಿನಾಂಕ 24.10.2017 ರಂದು 2 ನೇ ಪಕ್ಷಗಾರರು ಮಾಡಿದ ಆದೇಶವನ್ನು ರದ್ದು ಪಡಿಸಿ, ಅರ್ಜಿದಾರರನ್ನು ಕೆಲಸಕ್ಕೆ ಮರುನೇಮಕ ಮಾಡಿ ಬಾಕೀ ವೇತನ ಕೊಡುವಂತೆ ಎದುರುಗಾರ ಮ್ಯಾನೆಜಮೆಂಟನವರಿಗೆ ನಿರ್ದೇಶನ ನೀಡುವಂತೆ ವಿನಂತಿಸಿರುತ್ತಾರೆ.

2. ಅರ್ಜಿಯಲ್ಲಿನ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ. ः

   ಅರ್ಜಿದಾರರು ಎದುರುದಾರರ ಸಂಸ್ಥೆಯಲ್ಲಿ ದಿನಾಂಕಃ 01.02.2017 ರಂದು ಚಾಲಕ.ಕಂ.ನಿರ್ವಾಹಕ ಅಂತಾ ಸೇವೆಗೆ ಸೇರಿದಾಗಿನಿಂದ ನಮ್ರತೆಯಿಂದ ತನ್ನ ಸೇವೆಯನ್ನು ಕಾರ್ಪೋರೇಷನವರಿಗೆ ತೃಪ್ತಿಯಾಗುವಂತೆ, ಅವರನ್ನು ಸೇವೆಯಿಂದ ವಜಾ ಮಾಡುವವರೆಗೂ ಅಂದರೆ ದಿನಾಂಕಃ 24.10.2017 ರ ವರೆಗೊ ಸೇವೆ ಸಲ್ಲಿಸುತ್ತಾ ಬಂದಿದ್ದು ಇರುತ್ತದೆ. ಸದರಿಯವರು ಎದುರುಗಾರರ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವಾಗ ಅವರಿಗೆ ತೀವ್ರ

ಸ್ವರೂಪದ ಖಾಯಿಲೆ (Recurrent depressive disorder) ಅಂತಾ ದಿನಾಂಕಃ 05.06.2016 ರಿಂದ ಖಾಯಿಲೆ ಕಾಣಿಸಿಕೊಂಡಿದ್ದು, ಅದನ್ನು ಅವರ ಅನಾರೋಗ್ಯದ ಬಗ್ಗೆ ಅವರ ಕುಟುಂಬದ ಸದಸ್ಯರು ಗಮನಿಸಿ, ಅವರನ್ನು ಕಾರವಾರ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿನ ವೈದ್ಯರು ಅರ್ಜಿದಾರರರಿಗೆ ವಿಶ್ರಾಂತಿ ಪಡೆಯುವುದಕ್ಕಾಗಿ ಸೂಚಿಸಿದ್ದರು. ಸದರಿಯವರು ದಿನಾಂಕಃ 05.06.2016 ರಿಂದ ದಿನಾಂಕಃ 15.08.2017 ರ ವರೆಗೆ ಸದರಿ ಖಾಯಿಲೆಯಿಂದಾಗಿ ವಿಶ್ರಾಂತಿ ಪಡೆದಿದ್ದು ಹಾಗೂ ರಜಾ ಅರ್ಜಿಯನ್ನು ತಮ್ಮ ಹೆಂಡತಿಯ ಮೂಲಕ ಡಿಪೋ ಮ್ಯಾನೆಜರರಿಗೆ ಕಳುಹಿಸಿಕೊಟ್ಟಿದ್ದು ಇರುತ್ತದೆ. ರಜಾ ಅರ್ಜಿಯನ್ನು ಕಳುಹಿಸಿಕೊಟ್ಟಿದ್ದರಿಂದ ಅವರ ಕುಟುಂಬದ ಸದಸ್ಯರು ಅರ್ಜಿದಾರರ ರಜಾ ಅರ್ಜಿಯನ್ನು ಎದುರುದಾರರು ಮುಂಜೂರು ಮಾಡಿದ್ದಾರೆಂದು ಭಾವಿಸಿಕೊಂಡಿದ್ದು, ಅನಾರೋಗ್ಯದ ನಿಮಿತ್ತವಾಗಿ ಅರ್ಜಿದಾರರು ಯಾವುದಕ್ಕೂ ಸ್ಪಂದಿಸುವ ಸ್ಥಿತಿಯಲ್ಲಿರಲಿಲ್ಲಾ ಹಾಗೂ ಅದರಿಂದಾಗಿ ಇಲಾಖಾ ವಿಚಾರಣೆಗೂ ಕೂಡ ಹಾಜರಿರುವುದಿಲ್ಲಾ. ಅರ್ಜಿದಾರರ ಕುಟುಂಬದವರು ಸದರಿಯವರ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಕುರಿತಂತೆ ಎದುರುಗಾರರಿಗೆ ತಿಳಿಸಿದ್ದರು. ಸದರಿ ಅಂಶಗಳನ್ನು ವಿಚಾರಣಾಧಿಕಾರಿಯಾಗಲೀ, ಶಿಸ್ತು ಪ್ರಾಧಿಕಾರವಾಗಲೀ ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲಾ. ಅನಾರೋಗ್ಯದಿಂದ ಚೇತರಿಸಿಕೊಂಡ ಬಳಿಕ ಅರ್ಜಿದಾರರರು ದಿನಾಂಕಃ 16.08.2017 ರಂದು ಎದುರುದಾರರ ಅನಮತಿಯೊಂದಿಗೆ ಕೆಲಸಕ್ಕೆ ಹಾಜರಾಗಿದ್ದು, ಅರ್ಜಿದಾರರಿಗೆ ಎದುರುದಾರರು

ಆರೋಪಣ ಪಟ್ಟಿಯನ್ನು ದಿನಾಂಕಃ 28.10.2016 ರಲ್ಲಿ ಸಲ್ಲಿಸಿ ಅವರು ದಿನಾಂಕಃ 05.06.2016 ರಿಂದ ಅನಧಿಕೃತವಾಗಿ ಗೈರುಹಾಜರಾಗಿದ್ದರಂತಾ ತಿಳಿಸಿದ್ದು, ಅದಕ್ಕೆ ತೀವ್ರ ಸ್ವರೂಪದ ಖಾಯಿಲೆಯಿಂದ ಅನಾರೋಗ್ಯದ ನಿಮಿತ್ಯವಾಗಿ ತನಗೆ ಕೆಲಸಕ್ಕೆ ಹಾಜರಾಗಲು ಸಾಧ್ಯವಾಗಿಲ್ಲ ಅಂತಾ ವಿವರಣೆಯೊಂದಿಗೆ ಉತ್ತರ ನೀಡಿದ್ದು, ಅದರೆ ಎದುರುಗಾರ ಮ್ಯಾನೆಜಮೆಂಟನವರು ಅದಾವುದನ್ನೂ ಪರಿಗಣನೆಗೆ ತೆಗೆದುಕೊಳ್ಳದೇ ಹಾಗೂ ಸತ್ಯಾಂಶದ ಬಗ್ಗೆ ಪರಿಶೀಲಿಸದೇ ಅರ್ಜಿದಾರರ ವಿರುದ್ಧ ಇಲಾಖಾ ವಿಚಾರಣೆ (Domestic Inquiry) ಬಗ್ಗೆ ನಿಗದಿಪಡಿಸಿದ್ದು, ಸದರಿ ವಿಚಾರಣೆಯನ್ನೂ ಕೂಡ ಕ್ರಮಭದ್ಧವಾಗಿ ಮಾಡದೇ, ನಿಯಮಾವಳಿಗಳನ್ನು ಅನುಸರಿಸದೇ ಹಾಗೂ ವಿಚಾರಣಾಧಿಕಾರಿಗಳು ಎದುರುದಾರ ಮ್ಯಾನೆಜಮೆಂಟರವರ ಪರ ವರದಿಯನ್ನು ನೀಡಿದ್ದು, ಅದೂ ಕೂಡ ವಿಚಾರಣಾಧಿಕಾರಿಗಳು ಅರ್ಜಿದಾರರ ಅನೂಪಸ್ಥಿತಿಯಲ್ಲಿ ಹಾಗೂ ಅರ್ಜಿದಾರರಿಗೆ ಸಾಕಷ್ಟು ಕಾಲಾವಕಾಶ ಕೊಡದೇ ವರದಿಯನ್ನು ನೀಡಿದ್ದು ಇರುತ್ತದೆ. ಸದರಿ ವರದಿಯನ್ನಾಧರಿಸಿ ಅರ್ಜಿದಾರರ ವಿರುದ್ಧ ಅವರನ್ನು ಕೆಲಸದಿಂದ ವಜಾ ಗೊಳಿಸಿ ಮಾಡಿರುವ ಆದೇಶವು ತೀರ್ವ ಸ್ವರೂಪದ ಶಿಕ್ಷೆಯಾಗಿದ್ದು, ಕಾರಣ ಅರ್ಜಿದಾರರನ್ನು ವಜಾಗೊಳಿಸಿ ದಿನಾಂಕಃ 24.10.2017 ರಂದು ಮಾಡಿರುವ ಆದೇಶವನ್ನು ರದ್ದುಪಡಿಸಿ, ಎದುರುಗಾರ ಮ್ಯಾನೇಜಮೆಂಟರವರಿಗೆ ಸದರಿ ಕೆಲಸಗಾರ - ಅರ್ಜಿದಾರರಿಗೆ ಕೆಲಸಕ್ಕೆ ಪುನರ್ ನೇಮಕ ಮಾಡಿ ಅವರ ಬಾಕೀ ವೇತನ ಕೊಡುವಂತೆ ಎದುರುಗಾರ ಸಂಸ್ಥೆಯವರಿಗೆ ನಿರ್ದೇಶನ ನೀಡುವಂತೆ ವಿನಂತಿಸಿಕೊಂಡಿರುತ್ತಾರೆ.

3. ಸದರ ಅರ್ಜಿಗೆ ಎದುರುದಾರರು ತಮ್ಮ ವಕೀಲರ ಮೂಲಕ ತಕರಾರನ್ನು ಸಲ್ಲಿಸಿದ ವಿವರ ಈ ಕೆಳಗಿನಂತಿದೆಃ

ಅರ್ಜಿ ಅಂಶಗಳು ಸುಳ್ಳಿನಿಂದ ಕೂಡಿದ್ದು ಅರ್ಜಿಗಾಗಿ ಸೃಷ್ಟಿಮಾಡಿಕೊಳ್ಳಲಾಗಿದೆ ಹಾಗೂ ಅರ್ಜಿಯಲ್ಲಿ ಒಪ್ಪಿಕೊಂಡ ಅಂಶಗಳನ್ನು ಹೊರತುಪಡಿಸಿ ಇತರೆ ಎಲ್ಲಾ ಅಂಶಗಳನ್ನು ಎದುರುದಾರರು ಅಲ್ಲಗಳೆಯುತ್ತಿದ್ದು, ಮುಂದುವರೆದು ಅರ್ಜಿದಾರರು ದಿನಾಂಕಃ 05.06.2016 ರಿಂದ ಯಾವುದೇ ಪೂರ್ವಾನುಮತಿ ಮಾಹಿತಿ ನೀಡದೇ ಹಾಗೂ ಕಾರ್ಪೋರೇಷನ್ ನಿಯಮದಂತೆ ರಜಾ ಅರ್ಜಿಯನ್ನು ಸಲ್ಲಿಸದೇ ಅನಧಿಕೃತವಾಗಿ ಗೈರುಹಾಜರಾಗಿರುವುರೆಂದು, ಡಿಪೋ ಮ್ಯಾನೆಜರರವರು ದಿನಾಂಕಃ 12.07.2016, 26.09.2016 ಮತ್ತು 17.10.2016 ರಲ್ಲಿ ಹುಬ್ಬಳ್ಳಿ ಸಿಟಿ ಡಿಪೋ-2 ನ ವರದಿ ಶಿಸ್ತು ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸಿದ್ದು ಹಾಗೂ ಸದರಿಯವರ ಗೈರುಹಾಜರಾತಿಯಿಂದ ಪ್ರಯಾಣಿಕರಿಗೆ ಹಾಗೂ ಸಂಸ್ಥೆಗೆ ಆಗಿರುವ ಅನಾನೂಕೂಲತೆಗಳು ಹಾಗೂ ಆರ್ಥಿಕ ನಷ್ಟದ ಬಗ್ಗೆ ಹೇಳಿದ್ದು ಇರುತ್ತದೆ. ಸದರಿ ಡಿಪೋ ಮ್ಯಾನೇಜರರವರ ವರದಿಯನ್ನಾಧರಿಸಿ ಶಿಸ್ತು ಪಾಲಾನಾಧಿಕರಿಗಳು ಅರ್ಜಿದಾರರಿಗೆ ದಿನಾಂಕಃ 16.07.2016 ರಲ್ಲಿ ನೋಟಿಸ ಮುಟ್ಟಿದ 48 ತಾಸುಗಳಲ್ಲಿ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿದ್ದರೂ ಕೂಡ ಅರ್ಜಿದಾರರು ಕರ್ತವ್ಯಕ್ಕೆ ಹಾಜರಾಗಲಿಲ್ಲಾ. ನಂತರದಲ್ಲಿ ದಿನಾಂಕಃ 31.08.2016 ರಂದು ಮತ್ತೊಂದು ನೋಟಿಸ ನೀಡಿ, ನೋಟಿಸ ಮುಟ್ಟಿದ 24 ತಾಸುಗಳಲ್ಲಿ ಕರ್ತವ್ಯಕ್ಕೆ ಹಾಜರಾಗಬೇಕೆಂದು ತಿಳಿಸಿದ್ದು, ಆ

ನೋಟಿಸ ಜಾರಿಯಾದರೂ ಕೂಡ ಅರ್ಜಿದಾರರು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲಾ. ನಂತರದಲ್ಲಿ ದಿನಾಂಕ: 28.10.2016 ರಲ್ಲಿ ಅರ್ಜಿದಾರರರಿಗೆ ಸಿ. ಆ್ಯಂಡ್ ಡಿ. ರೆಗ್ಯೂಲೇಷನ್ ಪ್ರಕಾರ ದೋಷಾರೋಪಣೆ ಪಟ್ಟಿಯೊಂದಿಗೆ ನೊಂದಾಯಿತ ಅಂಚೆ ಮೂಲಕ ಕಳುಹಿಸಿಕೊಟ್ಟಿದ್ದು, ಅದರೊಂದಿಗೆ ದಾಖಲಾತಿಗಳ ವಿವರ ಹಾಗೂ ಸಾಕ್ಷಾಧಾರ ಪಟ್ಟಿಯನ್ನು ಸಹ ನೀಡಿದ್ದು ಅದು ಅರ್ಜಿದಾರರಿಗೆ ಜಾರಿಯಾಗಿದ್ದರೂ ಕೂಡ ಅದಕ್ಕೆ ಲಿಖಿತ ಉತ್ತರವನ್ನು ಅರ್ಜಿದಾರರು ಕೊಟ್ಟಿರುವುದಿಲ್ಲಾ. ನಂತರದಲ್ಲಿ ಶಿಸ್ತು ಪಾಲನಾಧಿಕಾರಿಗಳು ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಿ, ಅಸಿಸ್ಟೆಂಟ ಅಡಮಿನಿಸ್ಟ್ರೇಟಿವ್ ಆಫೀಸರ್ ಅವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿ ದಿನಾಂಕ: 01.12.2016 ರಲ್ಲಿ ಅದೇಶ ಮಾಡಿದ್ದು ಇದರಂತೆ ವಿಚಾರಣಾಧಿಕಾರಿಗಳು ಅರ್ಜಿದಾರರಿಗೆ (ಅಪಾದಿತನಿಗೆ) ವಿಚಾರಣೆಯ ದಿನಾಂಕವನ್ನು 16.01.2017 ಕ್ಕೆ ನಿಗದಿಪಡಿಸಿದ್ದು, ನೋಟಿಸ ನೀಡಿದರೂ ಅದು ಜಾರಿಯಾದರೂ ಅರ್ಜಿದಾರರು ಗೈರು ಹಾಜರು ಉಳಿದಿದ್ದು ನಂತರದಲ್ಲಿ 30.01.2017 ರಂದು ದಿನಾಂಕ ನಿಗದಿಪಡಿಸಿ ನೋಟಿಸ ನೀಡಿದ್ದರೂ ಅವರ ಸೇವಾ ದಾಖಲೆಯಲ್ಲಿರುವ ವಿಳಾಸಕ್ಕೆ ಸಹ ನೋಟಿಸ ಕೊಟ್ಟಿದ್ದು, ಅವು ಜಾರಿಯಾಗಿರುವುದಿಲ್ಲಾ. ತದನಂತರ ಪುನಃ 15.07.2011 ರಂದು ಕೂಡ ನೋಟೀಸ್ ಜಾರಿಯಾಗಿರುವುದಿಲ್ಲಾ ಆನಂತರ ಪುನಃ ದಿನಾಂಕ: 10.03.2007 ಕ್ಕೆ ದಿನಾಂಕವನ್ನು ನಿಗದಿಪಡಿಸಿ ನೋಟೀಸ ಕಳುಹಿಸಲಾಯಿತು. ದಿನಾಂಕ: 10.03.2017 ರಂದು ಮಂಡನಾಧಿಕಾರಿಗಳು ಇವರು ವಿಚಾರಣೆಗೆ

ಹಾಜರಾಗಿದ್ದು, ಆರೋಪಣಾ ಪ್ರಶ್ನೆಗಳನ್ನು ಕೇಳಿದ್ದು ಅರ್ಜಿದಾರರು ಅವುಗಳನ್ನೆಲ್ಲಾ ನಿರಾಕರಿಸಿದರು ಹಾಗೂ ಅವರ ಕೋರಿಕೆಯ ಮೇರೆಗೆ ವಿಚಾರಣೆಯನ್ನು ದಿನಾಂಕಃ 28.03.2017 ರಂದು ನಿಗದಿಪಡಿಸಿದ್ದು, ಆದರೆ ಆ ದಿವಸ ವಿಚಾರಣೆಗೆ ಹಾಜರಾಗಲು ವರದಿಗಾರರಿಗೆ ಸಾಧ್ಯವಾಗಲಿಲ್ಲಾವೆಂದು ಬಾಗಲಕೋಟ ಡಿವಿಜನಲ್ ಕಂಟ್ರೋಲರಗೆ ತಿಳಿಸಲಾಯಿತು. ತದನಂತರ ವಿಚಾರಣೆಯನ್ನು ದಿನಾಂಕ ಃ 12.04.2017 ಕ್ಕೆ ನಿಗದಿಪಡಿಸಿದ್ದು, ಆ ದಿವಸ ಮಂಡನಾಧಿಕಾರಿ ಹಾಗೂ ರಿಪೋರ್ಟಿಂಗ ಅಧಿಕಾರಿಗಳು ಅವರು ಹಾಜರಿದ್ದು ಆ ದಿವಸ ಕೂಡ ಅರ್ಜಿದಾರರು ಮಂಡನಾಧಿಕಾರಿ ಮುಂದೆ ಹಾಜರಾಗಿರುವುದಿಲ್ಲಾ. ಅದರಿಂದಾಗಿ ವಿಚಾರಣಾಧಿಕಾರಿಗಳು ಅವರ ಅನುಪಸ್ಥಿತಿಯಲ್ಲಿಯೇ ವಿಚಾರಣೆಯನ್ನು ಮುಂದುವರೆಸಿ, ಮ್ಯಾನೇಜಮೆಂಟ್ ಪರ ಸಾಕ್ಷಿ ಹೇಳಿಕೆ ಹಾಗೂ ಅವರು ಹಾಜರಪಡಿಸಿದ ನಿಶಾನೆ 1 ರಿಂದ 3 ದಾಖಲೆ ಪಡೆದುಕೊಂಡು ಪಾಟೀ ಸವಾಲಿಗಾಗಿ ದಿನಾಂಕಃ 28.04.2017 ಕ್ಕೆ ಮೂಂದೂಡಿದ್ದು ಹಾಗೂ ವಿಚಾರಣೆ ನಡುವಳಿಕೆ ಪ್ರತಿಯನ್ನು 12.04.2017 ರಲ್ಲಿ ಅರ್ಜಿದಾರರಿಗೆ ಕಳುಹಿಸಿಕೊಟ್ಟಿದ್ದು, ಅದು ಅರ್ಜಿದಾರರಿಗೆ ಜಾರಿಯಾಗಿದ್ದು ಪುನಃ 17.05.2017 ಕ್ಕೆ ವಿಚಾರಣೆ ನಿಗದಿಪಡಿಸಿದ್ದು ಇರುತ್ತದೆ. ಆ ದಿವಸವೂ ಕೂಡ ಅವರು ವಿಚಾರಣೆಗೆ ಹಾಜರಾಗದಿರುವುದರಿಂದ ಪುನಃ ವಿಚಾರಣೆಯನ್ನು ದಿನಾಂಕಃ 15.06.2017 ಕ್ಕೆ ವಿಚಾರಣೆಯನ್ನು ನಿಗದಿಪಡಿಸಿದ್ದು ಆ ದಿವಸವೂ ಕೂಡ ಅವರು ಗೈರುಹಾಜರಾಗಿದ್ದು, ಅದರಿಂದಾಗಿ ಅವರ ಪಾಟೀ ಸವಾಲು ಇಲ್ಲಾ ಅಂತಾ ಪರಿಗಣಿಸಿ ದಿನಾಂಕ ಃ 30.06.2017 ರಂದು ಹೇಳಿಕೆಗಾಗಿ

ನಿಗದಿಪಡಿಸಿ ದಿನಾಂಕ ಃ 15.06.2017 ರ ನಡವಳಿಕೆ ಪ್ರತಿಯನ್ನು ಅರ್ಜಿದಾರರಿಗೆ ಕಳುಹಿಸಿಕೊಟ್ಟಿದ್ದು ಇರುತ್ತದೆ. ಆದರೂ ಸಹ ದಿನಾಂಕಃ 30.06.2017 ಕ್ಕೆ ಅವರು ಗೈರು ಹಾಜರ ಆಗಿದ್ದರಿಂದ ಅವರ ಹೇಳಿಕೆ ಇಲ್ಲ ಅಂತಾ ವಿಚಾರಣಾಧಿಕಾರಿ ಇವರು ಪರಿಗಣಿಸಿ ಸಿ. ಆ್ಯಂಡ್ ಡಿ. ರೇಗ್ಯೂಲೇಷನ್ ಪ್ರಕಾರ ಸಾಕಷ್ಟು ಕಾಲಾವಕಾಶ ನೀಡಿ ವರದಿಯನ್ನು ಸಲ್ಲಿಸಿದ್ದು, ಆ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ, ಅರ್ಜಿದಾರರು ಕಾರ್ಪೋರೇಷನ್ ಸೇವೆಯಲ್ಲಿ ಮುಂದುವರೆಯಲು ಅರ್ಹರಲ್ಲ ಅಂತಾ ಹಾಗೂ ಅದೂ ಅಲ್ಲದೇ ಅವರ ಮೇಲೆ ಇರುವ ಈ ಹಿಂದಿನ 7 ಪ್ರಕರಣಗಳ ಬಗ್ಗೆ ಗಮನದಲ್ಲಿಟ್ಟುಕೊಂಡು ಅವರನ್ನು ವಜಾಗಳಿಸಿ ದಿನಾಂಕಃ 24.10.2017 ರಲ್ಲಿ ಆದೇಶ ಮಾಡಿದ್ದು ಇರುತ್ತದೆ.

ಔಧ್ಯಮಿಕ ವಿವಾದ ಸಂಖ್ಯೆ ಃ 289/2009 ಅಂತಾ ಇಂಡಸ್ಟ್ರೀಯಲ್ ಟ್ರಿಬ್ಯೂನಲ್, ಬೆಂಗಳೂರು ಇವರ ಮುಂದೆ ಚಾಲ್ತಿಯಲ್ಲಿದ್ದು, ಎದುರುದಾರ ಕಾರ್ಪೋರೇಷನವರು ಅಪ್ರೂವಲಗಾಗಿ ಸೀರಿಯಲ್ ಅಪ್ಲಿಕೇಷನನ್ನು ಔಧ್ಯಮಿಕ ವಿವಾದಗಳ ಕಾಯ್ದೆ ಕಲಂ 33(2)(ಬಿ) ದ ಪ್ರಕಾರ ಸಲಿಸಿದ್ದು ಹಾಗೂ ಎದುರುಗಾರರು 1 ತಿಂಗಳ ವೇತನ ರೂಃ 20,043/-ಗಳನ್ನು ಚೆಕ್ ನಂಃ 957849 ದಿನಾಂಕಃ 24.10.2017 ರಂದು ಕಳುಹಿಸಿಕೊಟ್ಟಿದ್ದು ಹಾಗೂ ಅರ್ಜಿಯನ್ನು ಇಂಡಸ್ಟ್ರೀಯಲ್ ಟ್ರಿಬ್ಯೂನಲ್, ಬೆಂಗಳೂರು ಇವರ ಮುಂದೆ ಆ್ಯಪ್ರೂವಲ ಅಪ್ಲಿಕೇಷನಗಳು ಬಾಕಿ ಇರುವಾಗ, ಅರ್ಜಿದಾರರು ಸದರಿ

ಅರ್ಜಿಯನ್ನು ಸಲ್ಲಿಸಿದ್ದು, ಈ ಅರ್ಜಿಯು ಊರ್ಜಿತವಾಗಲಾರದು. ಕಾರಣ ಸದರಿ ಅರ್ಜಿಯನ್ನು ವಜಾಗೊಳಿಸಬೇಕೆಂದು ವಿನಂತಿಸಿರುತ್ತಾರೆ.

4. ಉಭಯೇತರರ ಅರ್ಜಿ ಹಾಗೂ ತಕರಾರು ಅಂಶಗಳನಾಧರಿಸಿ, ನನ್ನ ಹಿಂದಿನ ಅಧ್ಯಕ್ಷಾಧಿಕಾರಿಗಳು ಈ ಕೆಳಗಿನ ವಿವಾದಾಂಶಗಳನ್ನು ನಿರೂಪಿಸಿದ್ದು ಇರುತ್ತವೆ.

1. ಎದುರುದಾರ ಸಂಸ್ಥೆಯವರು ಅರ್ಜಿದಾರರ ವಿರುದ್ಧ ನಡೆಸಿರುವ ಇಲಾಖಾ ವಿಚಾರಣೆಯು ಮುಕ್ತ ಹಾಗೂ ನ್ಯಾಯ ಸಮ್ಮತವಾಗಿದೆಯೇ ?

2. ಅರ್ಜಿದಾರರು ಸದರಿ ಅರ್ಜಿಯನ್ನು ಕಾಲಮಿತಿಯ ಒಳಗಡೆಯೇ ಸಲ್ಲಿಸಿದ್ದಾರೆಯೇ ?

3. ಎದುರುದಾರ ಸಂಸ್ಥೆಯವರು ಅರ್ಜಿದಾರರನ್ನು ದಿನಾಂಕಃ 24.10.2017 ರಂದು ಕೆಲಸದಿಂದ ವಜಾ ಮಾಡಿರುವುದು ನ್ಯಾಯ ಸಮ್ಮತವಾಗಿದೆಯೇ ?

4. ಅರ್ಜಿದಾರರು ತಾವು ಕೇಳಿರುವ ಪರಿಹಾರಗಳಿಗೆ ಅರ್ಹರಾಗಿರುತ್ತಾರೆಯೇ?

5. ಯಾವ ಆದೇಶ ಅಥವಾ ಆಜ್ಞೆ ?

5. ಅವುಗಳಲ್ಲಿ ವಿವಾದಾಂಶ 1ನ್ನು ಪ್ರಾಥಮಿಕ ವಿವಾದಾಂಶ ಅಂತಾ ಪರಿಗಣಿಸಿಲಾಗಿದೆ. ಸದರಿ ವಿವಾದಾಂಶದ ರುಜುವಾತಿಗಾಗಿ, ಎದುರುದಾರ-ಮ್ಯಾನೆಜಮೆಂಟನವರು ವಿಚಾರಣಾಧಿಕಾರಿಗಳ ಸಾಕ್ಷಿಯನ್ನು ಎಂ.ಡಬ್ಲ್ಯೂ.1 ಅಂತಾ ಮಾಡಿದ್ದು, ನಿಶಾನೆ ಎಂ.1 ರಿಂದಾ ಎಂ.39 ಅಂತಾ ದಾಖಲೆಗಳನ್ನು

ಗುರುತಿಸಿದ್ದು ಹಾಗೂ ಅರ್ಜಿದಾರರು ಸದರಿ ಎಂ.ಡಬ್ಲೂ.1 ರವರ ಪಾಟೀ ಸವಾಲು ಮಾಡಿಸಿದ್ದು ಇರುತ್ತದೆ. ಉಭಯೇತರರ ವಾದ - ವಿವಾದವನ್ನು ಆಲಿಸಿ ಹಾಗೂ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿ, ಹಿಂದಿನ ಅಧ್ಯಕ್ಷಾಧಿಕಾರಿಗಳು ವಿವಾದಾಂಶ ನಂಃ 1 ನ್ನು ಸಕಾರಾತ್ಮಕವೆಂದು ಉತ್ತರಿಸಿ, ವಿಚಾರಣೆ ಮುಕ್ತ ಹಾಗೂ ನ್ಯಾಯಸಮ್ಮತವಾಗಿದೆ ಎಂದು ಆದೇಶ ಮಾಡಿರುತ್ತಾರೆ. ನಂತರ ಗುಣ ಅವಗುಣಗಳ ಮೇಲೆ ಅರ್ಜಿದಾರರು ಡಬ್ಲೂ.ಡಬ್ಲೂ-1 ಅಂತಾ ತಮ್ಮ ಸಾಕ್ಷಿ ವಿಚಾರಣೆ ನೀಡಿದ್ದು, ನಿಶಾನೆ ಡಬ್ಲೂ-1 ರಿಂದಾ 3 ಅಂತಾ ದಾಖಲೆಗಳನ್ನು ಗುರುತಿಸಿದ್ದು ಇರುತ್ತದೆ ಹಾಗೂ ಉಭಯೇತರರ ವಾದವನ್ನು ಆಲಿಸಿದ್ದು ಇರುತ್ತದೆ.

6. ಮೇಲಿನ ಅಂಶಗಳಿಗೆ ನನ್ನ ತೀರ್ಮಾನಗಳು ಈ ಕೆಳಕಂಡಂತೆ ಇವೆ.

ವಿವಾದಾಂಶ. 1 ಃ ಈಗಾಗಲೇ ದಿನಾಂಕ್ಷ 05.04.2019 ರಂದು ಸಕಾರಾತ್ಮಕವೆಂದು ಉತ್ತರಿಸಲಾಗಿದೆ.
ವಿವಾದಾಂಶ 2 ಃ ಚರ್ಚಿಸುವ ಅಗತ್ಯತೆ ಇರುವುದಿಲ್ಲಾ.
ವಿವಾದಾಂಶ 3 ಃ ನಕಾರಾತ್ಮಕವಾಗಿ.
ವಿವಾದಾಂಶ 4 ಃ ಭಾಗಶಃ ಸಕಾರಾತ್ಮಕವಾಗಿ.
ವಿವಾದಾಂಶ 5 ಃ ಅಂತಿಮ ಆಜ್ಞೆಯಂತೆ

ಈ ಕೆಳಕಂಡ ಕಾರಣಗಳಿಗಾಗಿಃ

## ಕಾರಣಗಳು

7. **ವಿವಾದಾಂಶ ನಂ 1ಃ-** ಈ ವಿವಾದಾಂಶ ಕುರಿತಂತೆ ವಿಚಾರಣಾಧಿಕಾರಿಗಳ ಸಾಕ್ಷಿಯನ್ನಾಧರಿಸಿ ಹಾಗೂ ವಿಚಾರಣಾಧಿಕಾರಿಗಳ ಮುಂದೆ ಹಾಜರುಪಡಿಸಿದ

ದಾಖಲಾತಿಗಳನ್ನೂ ಸಹ ಗಮನದಲ್ಲಿಟ್ಟುಕೊಂಡು ಕ್ಲೇಮುದಾರರ ವಿರುದ್ಧ ನಡೆಸಿದ ಗೃಹ ವಿಚಾರಣೆ ಮುಕ್ತ ಹಾಗೂ ನ್ಯಾಯಸಮ್ಮತವಾಗಿದೆಂದು ಅಭಿಪ್ರಾಯಪಟ್ಟು ಈಗಾಗಲೇ ದಿನಾಂಕಃ 05.04.2019 ರಂದು ಈ ವಿವಾದಾಂಶವನ್ನು ಸಕಾರಾತ್ಮಕವೆಂದು ಉತ್ತರಿಸಿದ್ದು ಇರುತ್ತದೆ.

8. **<u>ವಿವಾದಾಂಶ ನಂ. 2-</u>** ಸದರಿ ವಿವಾದಾಂಶವನ್ನು ಆಗಿನ ಅಧ್ಯಕ್ಷಾಧಿಕಾರಿಗಳು ನಿರೂಪಿಸಿದ್ದು, ಆದರೆ ಸದರಿ ವಿವಾದಾಂಶ ಕುರಿತಂತೆ ಕ್ಲೇಮು ಅರ್ಜಿಯನ್ನು ಸಲ್ಲಿಸಿದ ದಿನಾಂಕವನ್ನು ಹಾಗೂ ಸದರಿ ಕ್ಲೇಮುದಾರರನ್ನು ವಜಾಗೊಳಿಸಿ ಮಾಡಿದ ಆದೇಶವನ್ನು ಗಮನಿಸಿದಾಗ, ವಜಾ ಮಾಡಿದ ಆದೇಶ ದಿನಾಂಕಃ 24.10.2017 ಆಗಿದ್ದು, ಕ್ಲೇಮು ಅರ್ಜಿಯನ್ನು ಸಲ್ಲಿಸಿದ ದಿನಾಂಕಃ 17.01.2018 ಆಗಿದ್ದು, ಕ್ಲೇಮು ಅರ್ಜಿಯನ್ನು ಕಾಲಮಿತಿಯೊಳಗೆ ಸಲ್ಲಿಸಿರುವುದು ಸ್ಪಷ್ಟವಾಗಿರುತ್ತದೆ. ಅದೂ ಅಲ್ಲದೇ ಕಛೇರಿಯಿಂದ ಚೆಕ್ ಸ್ಲಿಪ್ ಹಾಕುವ ಕಾಲಕ್ಕೆ ಚೆಕ್ ಸ್ಲಿಪ್‌ನಲ್ಲಿ ಕೂಡ ಕಾಲಮಿತಿ ಮೀರಿ ಅರ್ಜಿ ಸಲ್ಲಿಸಲಾಗಿದೆ ಅಂತಾ ನಮೂದು ಇರುವುದಿಲ್ಲಾ. ಅದು ಕಾಲಮಿತಿಯೊಳಗೆ ಸಲ್ಲಿಸಲಾಗಿದೆ ಅನ್ನುವುದಾಗಿದೆ. ಈ ಎಲ್ಲ ಅಂಶಗಳನ್ನು ಗಮನಿಸಿದಾಗ, ಸದರಿ ವಿವಾದಾಂಶವು ಕೈತಪ್ಪಿನಿಂದಾ ಆಗಿರುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ಅದರಂತೆ ಕ್ಲೇಮು ಅರ್ಜಿಯಲ್ಲಾಗಲೀ ಅಥವಾ ತಕರಾರಿನಲ್ಲಾಗಲೀ ಕಾಲಮಿತಿ ಕುರಿತಂತೆ ಎಲ್ಲಿಯೂ ಹೇಳಿರುವುದಿಲ್ಲಾ. ವಾದ-ವಿವಾದದ ಕಾಲಕ್ಕೆ ಆ ವಿವಾದಾಂಶದ ಕುರಿತು ಪ್ರಶ್ನೆ ಬಂದಿರುವುದಿಲ್ಲಾ. ಆ

ಕಾರಣದಿಂದಾಗಿ ಸದರಿ ವಿವಾದಾಂಶವನ್ನು ಚರ್ಚಿಸುವ ಅಗತ್ಯತೆ ಇರುವುದಿಲ್ಲಾ ಅಂತಾ ಉತ್ತರಿಸಿದ್ದೇನೆ.

9. **ವಿವಾದಾಂಶ ನಂಃ 3 ಮತ್ತು 4 ಃ-** ಈ ಎರಡು ವಿವಾದಾಂಶಗಳನ್ನು ಒಟ್ಟಾಗಿ ಚರ್ಚಿಸುವ ಅಗತ್ಯತೆ ಇರುವುದರಿಂದ ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

10. ವಿವಾದಾಂಶ ನಂಃ 3 ನ್ನು ರುಜುವಾತುಪಡಿಸುವ ಹೊಣೆಗಾರಿಕೆಯು ಎದುರುದಾರರ ಸಂಸ್ಥೆಯವರ ಮೇಲಿದ್ದು, ಅದಕ್ಕಾಗಿ ಎದುರುದಾರರ ಸಂಸ್ಥೆಯ ಪರ ವಕೀಲರು ತಮ್ಮ ವಾದದ ಮಂಡನೆ ಕಾಲಕ್ಕೆ ತಮ್ಮ ತಕರಾರಿನಲ್ಲಿ ಹೇಳಿದ ಹಾಗೆ ಸದರಿ ಕ್ಲೇಮುದಾರರು ದಿನಾಂಕಃ 05.06.2016 ರಿಂದ ಯಾವುದೇ ಪೂರ್ವಾನುಮತಿ ಮಾಹಿತಿ ನೀಡದೇ ಹಾಗೂ ಕಾರ್ಪೋರೇಷನ್ ನಿಯಮದಂತೆ ರಜಾ ಅರ್ಜಿಯನ್ನು ಸಲ್ಲಿಸದೇ ಅನಧಿಕೃತವಾಗಿ ಗೈರುಹಾಜರಾಗಿರುವುರೆಂದು, ಡಿಪೋ ಮ್ಯಾನೆಜರರವರು ದಿನಾಂಕಃ 12.07.2016, 26.09.2016 ಮತ್ತು 17.10.2016 ರಲ್ಲಿ ಹುಬ್ಬಳ್ಳಿ ಸಿಟಿ ಡಿಪೋ-2 ದವರು ಶಿಸ್ತು ಪ್ರಾಧಿಕಾರಕ್ಕೆ ತಮ್ಮ ವರದಿಯನ್ನು ಸಲ್ಲಿಸಿದ್ದು ಹಾಗೂ ಸದರಿಯವರ ಗೈರುಹಾಜರಾತಿಯಿಂದ ಪ್ರಯಾಣಿಕರಿಗೆ ಹಾಗೂ ಸಂಸ್ಥೆಗೆ ಆಗಿರುವ ಅನಾನೂಕೂಲತೆಗಳು ಹಾಗೂ ಆರ್ಥಿಕ ನಷ್ಟದ ಬಗ್ಗೆ ಹೇಳಿದ್ದು ಇರುತ್ತದೆ. ಸದರಿ ಡಿಪೋ ಮ್ಯಾನೇಜರರವರ ವರದಿಯನ್ನಾಧರಿಸಿ, ಶಿಸ್ತು ಪಾಲಾನಾಧಿಕರಿಗಳು ಅರ್ಜಿದಾರರಿಗೆ ದಿನಾಂಕಃ 16.07.2016 ರಲ್ಲಿ ನೋಟಿಸ ಮುಟ್ಟಿದ 48 ತಾಸುಗಳಲ್ಲಿ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿದ್ದರೂ ಕೂಡ ಅರ್ಜಿದಾರರು ಕರ್ತವ್ಯಕ್ಕೆ

ಹಾಜರಾಗಲಿಲ್ಲಾ. ನಂತರದಲ್ಲಿ ದಿನಾಂಕಃ 31.08.2016 ರಂದು ಮತ್ತೊಂದು ನೋಟಿಸ ನೀಡಿದ್ದು, ನೋಟಿಸ ಮುಟ್ಟಿದ 24 ತಾಸುಗಳಲ್ಲಿ ಕರ್ತವ್ಯಕ್ಕೆ ಹಾಜರಾಗಬೇಕೆಂದು ತಿಳಿಸಿದ್ದು, ಆ ನೋಟಿಸ ಜಾರಿಯಾದರೂ ಕೂಡ ಅರ್ಜಿದಾರರು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲಾ ಅದಕಾರಣ ಅವರ ಮೇಲೆ ಗೃಹ ವಿಚಾರಣೆಯನ್ನು ವಿಚಾರಣಾಧಿಕಾರಿಗಳು ಸಿ. ಆ್ಯಂಡ್ ಡಿ. ರೆಗ್ಯೂಲೇಷನ್ ಪ್ರಕಾರ ವಿಚಾರಣೆ ನಡೆಸಿದ್ದು, ವಿಚಾರಣೆ ನಡುವಳಿಕೆ ಪ್ರತಿಯನ್ನು ಕಳುಹಿಸಿಕೊಟ್ಟರೂ ಅದು ಅವರಿಗೆ ಜಾರಿಯಾಗಿದ್ದರೂ ಆ ದಿವಸವೂ ಕೂಡ ಹಾಜರಾಗದೇ ಇದ್ದುದರಿಂದ ಹಾಗೂ ಅದರಂತೆ ಮುಂದುವರೆದು ಅರ್ಜಿದಾರರು ಕೆಲಸಕ್ಕೆ ಹಾಜರಾಗದೇ ಇರುವ ಕಾರಣ ಸಾಕಷ್ಟು ಕಾಲಾವಕಾಶ ನೀಡಿ ಸಲ್ಲಿಸಿದ ವರದಿಯನ್ನು ಕೂಲಂಕಷಾಗಿ ಪರಿಶೀಲಿಸಿ, ಅವರ ಮೇಲೆ ಇರುವ ಹಿಂದಿನ 7 ಪ್ರಕರಣಗಳು ಅವುಗಳೆಲ್ಲವನ್ನೂ ಗಮನದಲ್ಲಿಟ್ಟುಕೊಂಡು, ಸರದರಿಯವರು ಕ್ಲೇಮುದಾರರು ಸಂಸ್ಥೆಯಲ್ಲಿ ಮುಂದುವರೆಯಲು ಅರ್ಹರಲ್ಲವೆಂದು ದಿನಾಂಕಃ 24.10.2017 ರಲ್ಲಿ ಅವರನ್ನು ಕೆಲಸದಿಂದ ವಜಾಗೊಳಿಸಿ, ಆದೇಶ ಮಾಡಿದ್ದು, ಸದರೀ ಆದೇಶವು ಕಾನೂನು ಸಮ್ಮತವಾಗಿದೆಂದು ಸದರಿ ಅರ್ಜಿಯನ್ನು ವಜಾಗೊಳಿಸುವಂತೆ ವಿನಂತಿಸಿರುತ್ತಾರೆ.

11. ಇನ್ನೂ ಕ್ಲೇಮುದಾರರ ಪರ ವಕೀಲರು ಕೂಡ ತಮ್ಮ ವಾದ -ವಿವಾದಾಂಶವನ್ನು ಮಂಡಿಸುತ್ತಾ ವಿಚಾರಣೆಯನ್ನು ಅಪಾದಿತರ ಅನುಪಸ್ಥಿತಿಯಲ್ಲಿಯೇ ಮುಂದುವರೆದು ಸಲ್ಲಿಸಿದ ವರದಿಯನ್ನು ಆಧರಿಸಿ ಅವರನ್ನು ವಜಾಗೊಳಿಸಿ ಕ್ರಮ ತೆಗೆದುಕೊಂಡಿರುವುದು ನ್ಯಾಯಸಮ್ಮತವಾಗಿರುವುದಿಲ್ಲವೆಂದು ಅದೂ

ಅಲ್ಲದೇ ಕ್ಲೇಮುದಾರರು ಕ್ಲೇಮು ಅರ್ಜಿಯುಲ್ಲಿ ಹೇಳಿದ ಹಾಗೆ ಅವರು ಗೈರುಹಾಜರಾತಿಗೆ ಸಂಬಂಧಪಟ್ಟ ಹಾಗೆ ಕಾರವಾರ ಜಿಲ್ಲಾ ಆಸ್ಪತ್ರೆಯಲ್ಲಿ ಮಾನಸಿಕ ವೈದ್ಯರ ಬಳಿ ಅವರು ಮಾನಸಿಕವಾಗಿ ಬಳಲುತ್ತಿದ್ದುರ ಬಗ್ಗೆ ಚಿಕಿತ್ಸೆ ಪಡೆದುಕೊಂಡಿದ್ದು, ಸದರಿಯವರ ಗೈರುಹಾಜರಾತಿ ಯಾವುದೇ ಉದ್ದೇಶಪೂರ್ವಾಕ ಕಾರಣದಿಂದ ಆಗಿರುವುದಿಲ್ಲಾ, ಅದು ಅಲ್ಲದೇ ರಜಾ ಚೀಟಿಯನ್ನು ಅವರು ತಮ್ಮ ಹೆಂಡತಿಯ ಮೂಲಕ ಎದುರುದಾರರ ಸಂಸ್ಥೆಯ ಕಛೇರಿಗೆ ಕಳುಹಿಸಿದ್ದು, ಆದರೆ ಸದರಿಯವರು ಸಲ್ಲಿಸಿದ ರಜೆ ಅರ್ಜಿ ಮತ್ತು ದಾಖಲೆಗಳ ಕುರಿತು ಯಾವುದೇ ಹಿಂಬರಹ ನೀಡಿರುವುದಿಲ್ಲಾ.

12. ಇನ್ನೂ ಸದರಿಯವರು ಮಾನಸಿಕವಾಗಿ ಬಳಲುತ್ತಿದ್ದು, ಆ ಬಗ್ಗೆ ಡಾ. ಮೋಹನಬಾಬು ಅವರ ಬಳಿ ಚಿಕಿತ್ಸೆ ಪಡೆದಿದ್ದಾರೆ ಅನ್ನುವ ಕುರಿತು ನಿಶಾನೆ. ಡಬ್ಲೂ. 1 ರಿಂದ ಡಬ್ಲೂ.3 ರವರೆಗೆ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಸಲ್ಲಿಸಿದ್ದು ಕ್ಲೇಮುದಾರರು ಮಾನಸಿಕವಾಗಿ ಬಳಲುತ್ತಾ ಇರುವುದರಿಂದ ಆ ಬಗ್ಗೆ ಚಿಕಿತ್ಸೆ ಪಡೆಯುವ ಅವಶ್ಯಕತೆವಿದ್ದು, ಆ ಅವಧಿಯಲ್ಲಿ ಚಿಕಿತ್ಸೆ ಪಡೆಯುವುದರ ಮೂಲಕ ಗೈರುಹಾಜರಾತಿ ಆಗಿರುವುದರಿಂದ ಅವರ ಮೇಲೆ ಗೃಹ ವಿಚಾರಣೆ ನಡೆಸಿ ಅದು ಅವರರ ಅನುಪಸ್ಥಿತಿಯಲ್ಲಿ ನಡೆಸಿ, ಆ ವರದಿಯನ್ನಾಧರಿಸಿ ಹಿಂದಿನ 7 ಪ್ರಕರಣಗಳ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಿಚಾರಣೆ ಮಾಡಿರುವ ಕ್ರಮವು ಸರಿಯಾಗಿರುವುದಿಲ್ಲಾ. ಈಗ ಕ್ಲೇಮುದಾರರು ಎಲ್ಲಾ ರೀತಿಯಿಂದಾ ಸರ್ಮಥರಿದ್ದು ಅವರು ಕುಟುಂಬದ ನಿರ್ವಹಣೆ ಅವರ ಮೇಲೆ ಇರುವುದರಿಂದ ಹಾಗೂ ಪ್ರಶ್ನಿತ

ಆದೇಶವು ಕಾನೂನುಸಮ್ಮತವಾಗಿಲ್ಲದ ಕಾರಣ ಸದರಿ ವಿಚಾರಣಾಧಿಕಾರಿಗಳು ಮಾಡಿದ ಆದೇಶವನ್ನು ರದ್ದುಪಡಿಸಿ, ಕ್ಲೇಮು ಅರ್ಜಿಯಲ್ಲಿ ಹೇಳಿದ ಹಾಗೆ ಸದರಿಯವರಿಗೆ ಬಾಕೀ ವೇತನ ನೀಡಿ, ಇತರೆ ಪರಿಹಾರಗಳನ್ನು ಕೊಟ್ಟು ಕೆಲಸಕ್ಕೆ ಮರು ಸೇರ್ಪಡೆ ಮಾಡಿಕೊಳ್ಳುವಂತೆ ವಿನಂತಿಸಿರುತ್ತಾರೆ.

13. ಇಲ್ಲಿ ಉಭಯೇತರರು ಹಾಜರುಪಡಿಸಿದ ದಾಖಲಾತಿಗಳನ್ನು ಹಾಗೂ ಸಾಕ್ಷಿ ವಿಚಾರಣೆಯ ಅಂಶಗಳನ್ನು ಹಾಗೂ ಪ್ರಕರಣದ ವಾಸ್ತವಾಂಶಗಳನ್ನೂ, ಮುಖ್ಯವಾಗಿ ಅರ್ಜಿದಾರರು ಹಾಜರು ಪಡಿಸಿದ ವೈಧ್ಯಕೀಯ ಪ್ರಮಾಣ ಪತ್ರಗಳನ್ನು ನಿಶಾನೆ ಡಬ್ಲ್ಯೂ.1 ರಿಂದಾ 3 ಇವುಗಳನ್ನು ಗಮನಿಸಿದಾಗ ಇಲ್ಲಿ ಅರ್ಜಿದಾರರ ಪರ ವಕೀಲರ ವಾದ ಸಂಪೂರ್ಣವಾಗಿ ತಳ್ಳಿ ಹಾಕಲು ಬರಲಾರದು.

14. ಇನ್ನೂ ಸದರಿ ದೀರ್ಘಾವಧಿಯಲ್ಲಿ ಅರ್ಜಿದಾರರು ಎಲ್ಲಿಯೂ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುವುದಿಲ್ಲಾ, ಹೊರ ರೋಗಿಯಾಗಿಯೇ ಚಿಕಿತ್ಸೆ ಪಡೆದಿರುವ ಅಂಶಗಳನ್ನು ಕೂಡ ಗಮನಕ್ಕೆ ತೆಗೆದುಕೊಳ್ಳುವ ಅವಶ್ಯಕವಿದ್ದು, ವೈದ್ಯರ ಪ್ರಮಾಣ ಪತ್ರದ ಪ್ರಕಾರ ಸಂಪೂರ್ಣ ವಿಶ್ರಾಂತಿಯ ಕುರಿತಂತೆ ನಿರ್ಣಯ ಮಾಡಿದ್ದುದರ ಬಗ್ಗೆ ಸ್ಪಷ್ಟತೆ ಇರುವುದಿಲ್ಲಾ. ಆದರೆ ಆ ಅವಧಿಯಲ್ಲಿ ಅವರು ಮಾನಸಿಕ ಕಾಯಿಲೆಯಿಂದ ತಮ್ಮ ಬಳಿ ಚಿಕಿತ್ಸೆಗೆ ಬರುತ್ತಿದ್ದರು ಅನ್ನುವುದಾಗಿರುತ್ತದೆ. ಆ ಕಾರಣದಿಂದಾ ಅರ್ಜಿದಾರರು ತಾವು ಕೇಳಿದ ಹಾಗೆ ಸಂಪೂರ್ಣ ಪರಿಹಾರವನ್ನು ಪಡೆಯಲು ಅರ್ಹರಾಗಿರುವುದಿಲ್ಲಾ.

15. ಮೇಲ್ಕಂಡಂತೆ ಉಭಯೇತರರ ವಾದ-ವಿವಾದಗಳ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಎದುರುದಾರರ ಸಂಸ್ಥೆಯಲ್ಲಿ ಸದರಿ ಅರ್ಜಿದಾರರನ್ನು ದಿನಾಂಕಃ 24.10.2017 ರಂದು ಕೆಲಸದಿಂದಾ ವಜಾ ಮಾಡಿದ ಆದೇಶವು ಕಾನೂನು ಸಮ್ಮತವಾಗಲಾರದು ಅಂತಾ ಅಭಿಪ್ರಾಯಪಟ್ಟು ವಿವಾದಾಂಶ ನಂಃ 3 ನ್ನು ನಕಾರಾತ್ಮಕವೆಂತಲೂ ಹಾಗೂ ಅರ್ಜಿದಾರರು ತಾವು ಕೇಳಿದ ಎಲ್ಲಾ ಪರಿಹಾರವನ್ನು ಪಡೆಯಲು ಅರ್ಹರು ಅಲ್ಲದೇ ಇದ್ದರೂ, ಸೂಕ್ತ ಪರಿಹಾರವನ್ನು ಪಡೆಯುಲು ಅಂದರೆ ಸೇವೆಗೆ ಮರು ಸೇರ್ಪಡೆಯಾಗಲು ಮಾತ್ರ ಅರ್ಜಿದಾರರು ಅರ್ಹರಿದ್ದಾರೆ ಅಂತಾ ಅಭಿಪ್ರಾಯಪಟ್ಟು, ವಿವಾದಾಂಶ ನಂಃ 4 ನ್ನು ಭಾಗಶಃ ಸಕಾರಾತ್ಮಕವೆಂತಲೂ ಉತ್ತರಿಸಿದ್ದೇನೆ.

16. **ವಿವಾದಾಂಶ ನಂಃ 5 ಃ**ಈ ಮೇಲೆ ಚರ್ಚಿಸಿದ ಕಾರಣಗಳಿಗಾಗಿ ಈ ಕೆಳಕಂಡಂತೆ ಆಜ್ಞೆ ಮಾಡುತ್ತಿದ್ದೇನೆ.

## ಆಜ್ಞೆ

ಕೆ.ಐ.ಡಿ. ನಂ. 01/2018 ನ್ನು ಭಾಗಶಃ ಪುರಸ್ಕರಿಸಲಾಗಿದೆ.

ಎದುರುದಾರರ ಸಂಸ್ಥೆಯವರು ಅರ್ಜಿದಾರರನ್ನು ಸೇವೆಯಿಂದ ವಜಾ ಮಾಡಿರುವ ಆದೇಶ ಸಂಖ್ಯೆ: VA.KA.RA.SA / HUVI / SHIKRASHA / GAIHA/689(16)3914 ದಿನಾಂಕ 24.10.2017 ರದ್ದುಗೊಳಿಸಲಾಗಿದೆ.

ಎದುರುದಾರರ ಸಂಸ್ಥೆಯವರು ಅರ್ಜಿದಾರರನ್ನು ಸೇವೆಗೆ ಮರು ಸೇರ್ಪಡೆಯನ್ನು ಸದರಿ ಐತೀರ್ಪು ಪ್ರಕಟಣೆಯಾದ ಎರಡು ತಿಂಗಳೊಳಗೆ ಮಾಡುವಂತೆ ನಿರ್ದೇಶನ ನೀಡಲಾಗಿದೆ.

ಅರ್ಜಿದಾರರು ಬಾಕೀ ವೇತನ ಹಾಗೂ ಇತರೇ ಸೌಲಭ್ಯಗಳನ್ನು ಪಡೆಯಲು ಅರ್ಹರಿರುವುದಿಲ್ಲಾ.

**<u>ಕೆ.ಐ.ಡಿ. ನಂಃ 01/2018</u>**

ಸದರಿ ಐತೀರ್ಪಿನ ಪ್ರತಿಯನ್ನು ಕರ್ನಾಟಕ ಸರ್ಕಾರಕ್ಕೆ ಔದ್ಯಮಿಕ ವಿವಾದಗಳ ಕಾಯ್ದೆ 1947 ಅಧಿನಿಯಮ ಪ್ರಕರಣ 17-ಎ ಯ ಅಡಿಯಲ್ಲಿ ಉಲ್ಲೇಖಿಸಿದಂತೆ ಪ್ರಕಟಣೆಗಾಗಿ ಅವರಿಗೆ ತಲುಪಿದ 30 ದಿನಗಳೊಳಗಾಗಿ ಪ್ರಕಟಿಸಲು ಆದೇಶದ ಪ್ರತಿಯನ್ನು ಕಳುಹಿಸಿಕೊಡಲು ಈ ಮೂಲಕ ನಿರ್ದೇಶಿಸಲಾಗಿದೆ.

(ಮೇಲಿನ ತೀರ್ಪನ್ನು ತೀರ್ಪು ಬರಹಗಾರರಿಗೆ ಉಕ್ತಲೇಖನ ಕೊಟ್ಟು, ಅವಳು ಗಣಕೀಕರಣ ಮಾಡಿದ ನಂತರ ಅದನ್ನು ಒದಿ, ತಿದ್ದಿ, ಇಂದು ದಿನಾಂಕ **30 ನೇ ಸೆಪ್ಟಂಬರ್ 2019** ರಂದು ಸಹಿ ಮಾಡಿರುವೆ)

ಸಹಿ/-
(ಎಸ್. ಎಂ. ಕಲಾಲ)
ಅಧ್ಯಕ್ಷಾಧಿಕಾರಿಗಳು,
ಕಾರ್ಮಿಕ ನ್ಯಾಯಾಲಯ, ಹುಬ್ಬಳ್ಳಿ

**<u>ಅನುಬಂಧ</u>**

**<u>1. ಅರ್ಜಿದಾರರ ಪರವಾಗಿ ಪರೀಕ್ಷಿಸಿದ ಸಾಕ್ಷಿದಾರರ ಪಟ್ಟಿಃ</u>**

ಡಬ್ಲೂ ಡಬ್ಲೂ -1 ಃ ಶ್ರೀ. ವಸಂತ ನಾಯ್ಕ

**<u>2. ಎದುರುದಾರರ ಪರವಾಗಿ ಪರೀಕ್ಷಿಸಿದ ಸಾಕ್ಷಿದಾರರ ಪಟ್ಟಿಃ</u>**

ಎಮ್.ಡಬ್ಲೂ 1ಃ ಶ್ರೀ.ಗುರುಪ್ರಸಾದ ಜಿ. ಹೋಗಾಡಿ.

**<u>3. ಅರ್ಜಿದಾರರ ಪರವಾಗಿ ಗುರುತಿಸಿಕೊಂಡ ದಸ್ತಾವೇಜುಗಳ ಪಟ್ಟಿಃ</u>**

ನಿಶಾನೆ. ಡಬ್ಲೂ -1 ಹೊರರೋಗಿ ಚೀಟಿ ಪುಸ್ತಕ
ನಿಶಾನೆ. ಡಬ್ಲೂ -2 ವೈಧ್ಯಕೀಯ ಪ್ರಮಾಣ ಪತ್ರ
ನಿಶಾನೆ. ಡಬ್ಲೂ -3 ವೈಧ್ಯಕೀಯ ಪ್ರಮಾಣ ಪತ್ರ

## 4. ಎದುರುದಾರರ ಪರವಾಗಿ ಗುರುತಿಸಿಕೊಂಡ ದಸ್ತಾವೇಜುಗಳ ಪಟ್ಟಿಃ

ನಿಶಾನೆ. ಎಂ-1 ವರದಿಗಾರರ ವರದಿ
ನಿಶಾನೆ. ಎಂ-2 ಡಿಪೋ ಮಾನೇಜರ ವರದಿ
ನಿಶಾನೆ. ಎಂ-3 ಡಿಪೋ ಮ್ಯಾನೇಜರ ವರದಿ
ನಿಶಾನೆ. ಎಂ-4 ಹಾಜರಿ ಹಾಳೆ
ನಿಶಾನೆ. ಎಂ-5 ಕರೆಪತ್ರ
ನಿಶಾನೆ. ಎಂ-6 ಹಿಂದುರುಗಿ ಬಂದ ಪೋಸ್ಟಲ್ ಕವರ್
ನಿಶಾನೆ. ಎಂ-7 ಪೋಸ್ಟಲ್ ಮರುಪಾವತಿ.
ನಿಶಾನೆ. ಎಂ-7(ಎ) ಅರ್ಜಿದಾರರ ಸಹಿ
ನಿಶಾನೆ ಎಂ-08 ಎರಡನೇ ಕರೆ ಪತ್ರ
ನಿಶಾನೆ ಎಂ-08(ಎ) ಅರ್ಜಿದಾರರ ಸಹಿ
ನಿಶಾನೆ. ಎಂ-9 ಆರೋಪಣಾ ಪತ್ರ
ನಿಶಾಂನೆ ಎಂ-09(ಎ) ಅರ್ಜಿದಾರರ ಸಹಿ
ನಿಶಾನೆ ಎಂ.10 ವಿಚಾರಣಾ ಅಧಿಕಾರಿ ನೇಮಕಾತಿ ಆಜ್ಞೆ
ನಿಶಾನೆ. ಎಂ-11 ವಿಚಾರಣಾ ಆರ್ಡರ್ ಶೀಟ್
ನಿಶಾನೆ. ಎಂ-12 ವಿಚಾರಣಾ ಪತ್ರ
ನಿಶಾನೆ. ಎಂ-13 ವಿಚಾರಣಾ ಪತ್ರ
ನಿಶಾನೆ. ಎಂ-14 ಪತ್ರ ದಿನಾಂಕ ಃ 31.01.2017
ನಿಶಾನೆ. ಎಂ-15 ಪತ್ರ ದಿನಾಂಕಃ 01.02.2017
ನಿಶಾನೆ. ಎಂ-16 ಪತ್ರ ದಿನಾಂಕಃ 20.02.2017
ನಿಶಾನೆ. ಎಂ-17 ವಿಚಾರಣೆ ತಿಳುವಳಿಕೆ ಪತ್ರಗಳು (5)
ನಿಶಾನೆ. ಎಂ-18 ವಿಚಾರಣಾ ನೋಟಿಸ
ನಿಶಾನೆ. ಎಂ-19 ಸೆಕ್ಯೂರಿಟಿ ಇನ್ಸಪೆಕ್ಟರ್ ಅವರಿಗೆ ಬರೆದ ಪತ್ರ.
ನಿಶಾನೆ. ಎಂ-20 ವಿಚರಣಾ ತಿಳುವಳಿಕೆ ಪತ್ರಗಳು.

ನಿಶಾನೆ. ಎಂ.21 ಬಾಗಲಕೋಟ ಡಿ.ಸಿ.ಯವರಿಗೆ ಬರೆದ ಪತ್ರ.

ನಿಶಾನೆ. ಎಂ.22 ಡಿ.ಸಿ. ಯವರಿಗೆ ಬರೆದ ಪತ್ರ.

ನಿಶಾನೆ. ಎಂ.23 ಸೆಕ್ಯೂರಿಟಿ ಇನ್ಸಪೆಕ್ಟರರವರಿಗೆ ಬರೆದ ಪತ್ರ.

ನಿಶಾನೆ. ಎಂ.24 ವಿಚಾರಣಾ ಪತ್ರ

ನಿಶಾನೆ. ಎಂ.25 ಪಿ.ಎಂ. ದೊರಕರ ಇವರು ಸೆಕ್ಯೂರಿಟಿ ಇನ್ಸಪೆಕ್ಟರ ಇವರಿಗೆ ಬರೆದ ಪತ್ರ

ನಿಶಾನೆ. ಎಂ.26 ವಿಚರಣಾ ಪತ್ರ

ನಿಶಾನೆ. ಎಂ.27 ಡಿ.ಸಿ.ಯವರಿಗೆ ಸೆಕ್ಯೂರಿಟಿ ಇನ್ಸಪೆಕ್ಟರ್ ಇವರು ಬರೆದ ಪತ್ರ

ನಿಶಾನೆ. ಎಂ.28 ಪ್ರಾಥಮಿಕ ಹೇಳಿಕೆ

ನಿಶಾನೆ. ಎಂ.29 ವಿಚರಣಾ ನಡುವಳಿಕೆಗಳು

ನಿಶಾನೆ. ಎಂ.30 ವಿಚರಣಾ ನಡುವಳಿಕೆಗಳು

ನಿಶಾನೆ. ಎಂ.31 ವಿಚಾರಣಾ ಫಲಶೃತಿ

ನಿಶಾನೆ. ಎಂ.32 ಅಧಿಕೃತ ಜ್ಞಾಪನ ಪತ್ರ

ನಿಶಾನೆ. ಎಂ.33 ಕಾರಣ ಕೇಳುವ ನೋಟಿಸು.

ನಿಶಾನೆ. ಎಂ.34 ಅರ್ಜಿದಾರರು ಎದುರುದಾರರಿಗೆ ಬರೆದ ಪತ್ರ.

ನಿಶಾನೆ. ಎಂ.35 ಹಿಂಬರಹ.

ನಿಶಾನೆ. ಎಂ.36 ಕರ್ತವ್ಯಕ್ಕೆ ಹಾಜರಾಗಲು ಅನುಮತಿ ನೀಡುವ ಬಗ್ಗೆ ಪತ್ರ.

ನಿಶಾನೆ ಎಂ.37 ಅನುಮತಿ ಪತ್ರ ದಿನಾಂಕಃ 17.08.2017

ನಿಶಾನೆ. ಎಂ.38 ಗೈರು ಹಾಜರಾತಿ ಬಗ್ಗೆ ಇತಿಹಾಸ ಪಟ್ಟಿ.

ನಿಶಾನೆ. ಎಂ.39 ಕೆಲಸದಿಂದ ತೆಗೆದು ಹಾಕಿರುವ / ವಜಾ ಆದೇಶ ದಿನಾಂಕಃ 24.10.2017.

ಹುಬ್ಬಳ್ಳಿ.

ಸಹಿ/-

ಅಧ್ಯಕ್ಷಾಧಿಕಾರಿಗಳು,
ಕಾರ್ಮಿಕ ನ್ಯಾಯಾಲಯ, ಹುಬ್ಬಳ್ಳಿ.

ದಿನಾಂಕಃ 30.09.2019